MAY 25, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಶಾಲಾ ಮಕ್ಕಳಲ್ಲಿ ವಿಪತ್ತು ಜಾಗೃತಿ; ಗ್ರಾಮಗಳಲ್ಲಿ, ವಿಪತ್ತು ನಿರ್ವಹಣಾ ಸಮಿತಿ ರಚನೆಗೆ, ರಾಜ್ಯಪಾಲರ, ಸಲಹೆ.**
- **ರಾಜ್ಯದಲ್ಲಿ, ಕೋವಿಡ್ ಪ್ರಕರಣಗಳ ಸಂಖ್ಯೆ 35ಕ್ಕೆ ಏರಿಕೆ; ಗಾಬರಿ ಬೇಡ, ಮುಂಜಾಗ್ರತೆ ವಹಿಸಿ, ಆರೋಗ್ಯ ಇಲಾಖೆ ಮನವಿ.**
- **ಕೇರಳಕ್ಕೆ ಮುಂಗಾರು ಪ್ರವೇಶ; ರಾಜ್ಯದ ಕರಾವಳಿ ಹಾಗೂ ಒಳನಾಡಿನ ಹಲವೆಡೆ, ವ್ಯಾಪಕ ಮಳೆ.**
- **ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, 'ಮನ್ ಕಿ ಬಾತ್.'**

<><><>

**ಈಗ ವಾರ್ತೆಗಳ ವಿವರ**

<><><>

**ಶಾಲಾ ಮಕ್ಕಳಿಗೆ ವಿಪತ್ತು ಜಾಗೃತಿ ತರಬೇತಿ ಹಾಗೂ ಗ್ರಾಮಗಳಲ್ಲಿ ವಿಪತ್ತು ನಿರ್ವಹಣಾ ಸಮಿತಿ ರಚನೆಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸಲಹೆ ನೀಡಿದ್ದಾರೆ. ಬೆಂಗಳೂರಿನ ಜವಹರ್‌ಲಾಲ್ ನೆಹರು ಸುಧಾರಿತ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ, ವಿಶ್ವ ವಿಪತ್ತು ನಿರ್ವಹಣಾ ಸಮ್ಮೇಳನದಲ್ಲಿ ಪಾಲ್ಗೊಂಡು, ಮಾತನಾಡಿದರು. ವಿಪತ್ತು ನಿರ್ವಹಣೆಯಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಸಾಮಾಜಿಕ ಭಾಗವಹಿಸುವಿಕೆಯ ಅಗತ್ಯವಿದೆ. ವಿಪತ್ತು ನಿರ್ವಹಣೆಯನ್ನು ಅಭಿವೃದ್ಧಿ ನೀತಿಯ ಅವಿಭಾಜ್ಯ ಅಂಗವಾಗಿಸಬೇಕಿದೆ ಎಂದರು.**

<><><>

**ಉತ್ತರಾಖಂಡ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಮಹಾನಿರ್ದೇಶಕ ಪ್ರೊಫೆಸರ್ ದುರ್ಗೇಶ್ ಪಂತ್, ಜವಹರ್‌ಲಾಲ್ ನೆಹರು ಸುಧಾರಿತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಪ್ರೊಫೆಸರ್ ಉಮೇಶ್ ವಾಘ್ಮರ್ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡು, ಪ್ರದರ್ಶಿನಿ ವೀಕ್ಷಿಸಿದರು.**

<><><>

ರಾಜ್ಯದ ಸರ್ಕಾರಿ ಅಂಗನವಾಡಿ ಕೇಂದ್ರಗಳಲ್ಲಿ, ಸದ್ಯದಲ್ಲೇ ಎಲ್.ಕೆ.ಜಿ ಮತ್ತು ಯು.ಕೆ.ಜಿ ಹಂತದ ಮಾಂಟೆಸ್ಸರಿ ತರಗತಿಗಳನ್ನು ಆರಂಭಿಸಲಾಗುವುದು ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ ಮಾತನಾಡಿದ ಅವರು, ಜಿಲ್ಲೆಯ 130 ಸರ್ಕಾರಿ ಅಂಗನವಾಡಿ ಕೇಂದ್ರಗಳಲ್ಲಿ, ಸಕ್ಷಮ್ ಅಂಗನವಾಡಿ ಎಂಬ, ಸ್ಮಾರ್ಟ್ ಅಂಗನವಾಡಿ ತರಗತಿಗಳನ್ನು ಆರಂಭಿಸಲಾಗುತ್ತಿದೆ ಎಂದರು.

<><><>

ರಾಜ್ಯದಲ್ಲಿ, ಕಳೆದ 20 ದಿನಗಳಲ್ಲಿ, ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 35ಕ್ಕೆ ಏರಿಕೆಯಾಗಿದೆ; ಗಾಬರಿ ಬೇಡ, ಮುಂಜಾಗ್ರತೆ ವಹಿಸಿ ಎಂದು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಕೋರಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಯಳ್ಳೂರ ಗ್ರಾಮದ, 25 ವ ೯ದ ಗರ್ಭಿಣಿ ಓರ್ವರಲ್ಲಿ ಕೋವಿಡ್ ಪತ್ತೆಯಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಈಶ್ವರ ಗಡಾದ ತಿಳಿಸಿದ್ದಾರೆ.

<><><>

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ, ಹೊಸಪೇಟೆಯಲ್ಲಿ, ತಲಾ ಒಬ್ಬರಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿದೆ ಎಂದು, ಬಳ್ಳಾರಿ ಜಿಲ್ಲಾ ಆರೋಗ್ಯಾಧಿಕಾರಿ, ರಮೇಶ್ ಬಾಬು ಮಾಹಿತಿ ನೀಡಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ, ಆನಗೋಡ ಸೇವಾ ಸಹಕಾರಿ ಸಂಘ ಹಾಗೂ ಅಡಕೆ, ಸಾಂಬಾರು ಬೆಳೆಗಾರ, ಸಂಘ ಶಿರಸಿ, ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ, "ಬೆಟ್ಟ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ" ಅಭಿಯಾನ ಉದ್ಘಾಟಿಸಿ, ದಿಕ್ಸೂಚಿ ಭಾಷಣ ಮಾಡಿದ, ಸಸ್ಯ ಶಾಸ್ತ್ರಜ್ಞ ಡಾಕ್ಟರ್ ಕೇಶವ ಹೆಗಡೆ ಕೊರ್ಸೆ, ಬೆಟ್ಟ, ಗ್ರಾಮದ ಸಾಮೂಹಿಕ ಆಸ್ತಿ. ಬೆಟ್ಟದಲ್ಲಿ ಜೀವ ವೈವಿಧ್ಯ ಪಲ್ಲವಿಸಿದಾಗ, ನಮ್ಮ ತೋಟಕ್ಕೂ ಅನುಕೂಲವಾಗಲಿದೆ ಎಂದರು.

<><><>

ಡಾ. ಕೇಶವ ಹೆಗಡೆ ಕೊರ್ಸೆ ಧ್ವನಿ 28 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಅಡಕೆ, ಸಾಂಬಾರು ಬೆಳೆಗಾರರ ಸಂಘದ ಅಧ್ಯಕ್ಷ ನಾರಾಯಣ ಹೆಗಡೆ, ಗಡಿಕೈ ಅವರು, ಭೈರುಂಭೆ ಭಾಗದಲ್ಲಿ ಬೆಟ್ಟ ಬೆಳೆಸಿದ ಮತ್ತು ಬಳಸಿಕೊಳ್ಳುತ್ತಿರುವ ಮಾದರಿ ಪ್ರಯತ್ನದ ಬಗ್ಗೆ, ಮಾಹಿತಿ ನೀಡಿದರು.

<><><>

ವಿಜಯಪುರ ಜಿಲ್ಲೆ, ಬಬಲೇಶ್ವರ ತಾಲೂಕು, ನಾಗರಾಳ ಗ್ರಾಮದ ನಿವಾಸಿ ಮಂಜುನಾಥ ಶಿವಪ್ಪ ನಿಡೋಣಿ ಅವರು, ಕೇಂದ್ರ ಲೋಕಸೇವಾ ಆಯೋಗ ನಡೆಸಿದ, 2024 ನೇ ಸಾಲಿನ, ಭಾರತೀಯ ಅರಣ್ಯ ಸೇವೆ – ಐ.ಎಫ್.ಎಸ್. ಪರೀಕ್ಷೆಯಲ್ಲಿ, ದೇಶಕ್ಕೆ ಐದನೇ ರ್‍ಯಾಂಕ್ ಗಳಿಸಿದ, ಹಿರಿಮೆ ಹೊಂದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಮಂಜುನಾಥ ನಿಡೋಣಿ ಧ್ವನಿ 30 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಕೇರಳಕ್ಕೆ ಪ್ರಸಕ್ತ ಸಾಲಿನ ಮುಂಗಾರು ಪ್ರವೇಶವಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಘೋಷಿಸಿದೆ. 2009ರ ಬಳಿಕ ಮುಂಗಾರು ಸಾಕಷ್ಟು ಮುಂಚಿತವಾಗಿ ಪ್ರವೇಶವಾಗಿರುವುದು, ಇದೇ ಮೊದಲು ಎಂದು ಹೇಳಲಾಗಿದೆ.

<><><>

ಉತ್ತರಕನ್ನಡ ಜಿಲ್ಲೆಯಾದ್ಯಂತ, 27ರ ವರೆಗೆ 'ರೆಡ್ ಅಲರ್ಟ್' ಘೋಷಿಸಲಾಗಿದ್ದು, ಹವಾಮಾನ ಇಲಾಖೆ ಮುನ್ಸೂಚನೆಯಂತೆ, ವ್ಯಾಪಕ ಮಳೆ ಹಿನ್ನೆಲೆ, ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತದ ಕಾರಣ, ಹೆದ್ದೆರೆಗಳು ಏಳುವ ಸೂಚನೆ ಇದ್ದು, ಮಾಜಾಳಿಯಿಂದ ಭಟ್ಕಳದ ವರೆಗೆ, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ, ಸೂಚಿಸಲಾಗಿದೆ.

<><><>

ಮಡಿಕೇರಿ ಸೇರಿದಂತೆ, ಕೊಡಗು ಜಿಲ್ಲೆಯಲ್ಲಿ, ಧಾರಾಕಾರ ಮಳೆಯಾಗುತ್ತಿದೆ. ಕೊಡಗು ಜಿಲ್ಲೆಗೆ, ರೆಡ್ ಅಲರ್ಟ್ ಘೋಷಿಸಲಾಗಿದೆ. ಕಾವೇರಿ ಹಾಗೂ ಲಕ್ಷ್ಮಣತೀರ್ಥ ನದಿಗಳಲ್ಲಿ, ಗಣನೀಯ ಮಟ್ಟದಲ್ಲಿ, ನೀರಿನ ಪ್ರಮಾಣ ಏರಿಕೆಯಾಗಿದೆ.

<><><>

ಧಾರವಾಡ ಜಿಲ್ಲೆಗೆ, ಮೂರು ದಿನಗಳ ವರೆಗೆ, ಆರೇಂಜ್ ಅಲರ್ಟ್ ಘೋಷಿಸಲಾಗಿದೆ. ಪ್ರವಾಹಕ್ಕೆ ತುತ್ತಾಗಲಿರುವ, 56 ಗ್ರಾಮಗಳಲ್ಲಿ ಮುಂಜಾಗ್ರತೆ ವಹಿಸಲು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಸೂಚಿಸಿದ್ದಾರೆ.

<><><>

ಕಣ್ಮರೆಯಾಗಲಿರುವ ಹಾಗೂ ನಶಿಸಿ ಹೋಗುತ್ತಿರುವ, ಸ್ಥಳೀಯ ಬೀಜಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಉದ್ದೇಶದಿಂದ, ಸಮುದಾಯ ಬೀಜ ಬ್ಯಾಂಕ್ ಸ್ಥಾಪಿಸಲು, ದೇಸಿ ತಳಿ ಬೀಜಗಳ ಸಂರಕ್ಷಣೆ ಮತ್ತು ಉತ್ತೇಜನ ಯೋಜನೆ ಅಡಿ, ರಾಜ್ಯ ಸರ್ಕಾರ ಯೋಜಿಸಿದೆ. ದೇಸಿ ತಳಿಗಳನ್ನು ಬೆಳೆದು ಸಂರಕ್ಷಿಸುತ್ತಿರುವ ರೈತರು, ಈ ತಿಂಗಳ 31ರ ಒಳಗೆ, ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ, ಮಾಹಿತಿ ನೀಡಲು ಕೋರಲಾಗಿದೆ.

<><><>

ಸಮುದಾಯ ಬೀಜ ಬ್ಯಾಂಕ್ ಮಹತ್ವದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಸಹಜ ಸಮೃದ್ಧ ಸಂಸ್ಥೆಯ, ಬೀಜ ಬ್ಯಾಂಕ್ ಸಂಯೋಜಕ, ಶಾಂತಕುಮಾರ.

<><><>

ಶಾಂತಕುಮಾರ ಧ್ವನಿ 50 ಸೆಕೆಂದುಗಳು

<><><>

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, 'ಕನ್ನಡದ ಆಸ್ತಿ' ಎಂದೇ ಲೋಕ ವಿಖ್ಯಾತಿ ಗಳಿಸಿದ, ಕನ್ನಡದ ಸಣ್ಣ ಕಥೆಗಳ ಜನಕ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ, 134ನೇ ಜಯಂತ್ಯುತ್ಸವ, ಜೂನ್ 6ರಂದು, ಕೋಲಾರ ಜಿಲ್ಲೆ, ಮಾಲೂರು ತಾಲೂಕು, ಮಾಸ್ತಿ ಗ್ರಾಮದಲ್ಲಿ ಆಯೋಜಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಎಂ.ಆರ್. ರವಿ ತಿಳಿಸಿದ್ದಾರೆ. ಜಯಂತ್ಯುತ್ಸವ

ಸಿದ್ಧತೆಯ, ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಾಸ್ತಿ ಅವರ ಮನೆಯ ಆವರಣದಲ್ಲಿ, ದಾನಿಗಳು ನೀಡಿದ, ಅವರ ಪುತ್ಥಳಿ ಅನಾವರಣಗೊಳ್ಳಲಿದೆ. ಮಧ್ಯಾಹ್ನ 1 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ, ಎಂದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ, ದೇಶ ಬಾಂಧವರೊಂದಿಗೆ, ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 122ನೇ ಸಂಚಿಕೆಯಾಗಲಿದೆ.

<><><>

ಎಚ್.ಇ.ಅಂಬಿಕಾ, ಶಿವಮೊಗ್ಗದಲ್ಲಿ ನಡೆದ, ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ, 76 ಕಿಲೋ ವಿಭಾಗದ ಫ್ರೀ ಸ್ಟೈಲ್ ಮಹಿಳಾ ಕುಸ್ತಿ ಪಂದ್ಯದಲ್ಲಿ, ಪ್ರಥಮ ಸ್ಥಾನ ಪಡೆದು, ಎರಡನೇ ಬಾರಿ, ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಕೋಲಾರ ಜಿಲ್ಲೆ, ಮಾಲೂರು ತಾಲೂಕಿನ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಪ್ರಥಮ ದರ್ಜೆ ಸಹಾಯಕಿಯಾಗಿ, ಅವರು ಸೇವೆ ಸಲ್ಲಿಸುತ್ತಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಠದಲ್ಲಿ, ಎರಡು ಸಾವಿರ ಮಕ್ಕಳಿಗೆ, ಶ್ರೀ ಅಭಿನವ ಗವಿಶ್ರೀಗಳು, ಅಕ್ಷರಾಭ್ಯಾಸ ಮಾಡಿಸಿದರು.

<><><>

ಧಾರವಾಡದ ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಚಿತ್ರಕಲಾ ಶಿಕ್ಷಕರಾಗಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ, ಹಿರಿಯ ಕಲಾವಿದ ಎಂ.ಆರ್.ಬಾಳಿಕಾಯಿ ಸನ್ಮಾನಿಸಲಿದ್ದಾರೆ.

<><><>

ಕೇಂದ್ರ ಲೋಕಸೇವಾ ಆಯೋಗದ, ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆ, ಇಂದು, ಧಾರವಾಡದ 26 ಪರೀಕ್ಷಾ ಕೇಂದ್ರಗಳಲ್ಲಿ, ಜರುಗಲಿವೆ.

<><><>

ಸೋಮವಾರದಿಂದ, ಜೂನ್ 2ನೇ ತಾರೀಖಿನ ವರೆಗೆ, ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ –2 ರಾಜ್ಯಾದ್ಯಂತ ನಡೆಯಲಿದೆ.

<><><>

ಪರಿಶಿ ್ಟ ಜಾತಿ, ಒಳ ಮೀಸಲಾತಿ ವರ್ಗೀಕರಣ ದತ್ತಾಂಶ ಸಂಗ್ರಹಣೆಗಾಗಿ ನಡೆದಿರುವ, ಸಮೀಕ್ಷೆ ಅವಧಿಯನ್ನು, ಈ ತಿಂಗಳ 29 ರ ವರೆಗೆ ವಿಸ್ತರಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಶಾಲಾ ಮಕ್ಕಳಲ್ಲಿ ವಿಪತ್ತು ಜಾಗೃತಿ; ಗ್ರಾಮಗಳಲ್ಲಿ, ವಿಪತ್ತು ನಿರ್ವಹಣಾ ಸಮಿತಿ ರಚನೆಗೆ, ರಾಜ್ಯಪಾಲರ, ಸಲಹೆ.

- ರಾಜ್ಯದಲ್ಲಿ, ಕೋವಿಡ್ ಪ್ರಕರಣಗಳ ಸಂಖ್ಯೆ 35ಕ್ಕೆ ಏರಿಕೆ; ಗಾಬರಿ ಬೇಡ, ಮುಂಜಾಗ್ರತೆ ವಹಿಸಿ, ಆರೋಗ್ಯ ಇಲಾಖೆ ಮನವಿ.

- ಕೇರಳಕ್ಕೆ ಮುಂಗಾರು ಪ್ರವೇಶ; ರಾಜ್ಯದ ಕರಾವಳಿ ಹಾಗೂ ಒಳನಾಡಿನ ಹಲವೆಡೆ, ವ್ಯಾಪಕ ಮಳೆ.
- ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, 'ಮನ್ ಕಿ ಬಾತ್.'

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>